ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 1483
ಸದಸ್ಯರ ಹೆಸರು	: ಶ್ರೀ ಸಿ.ಆರ್.ಮನೋಹರ್
ಉತ್ತರಿಸಬೇಕಾದ ದಿನಾಂಕ	: 19.03.2020
ಉತ್ತರಿಸುವ ಸಚಿವರು	: ಗೃಹ ಸಚಿವರು

<table>
<tr><th>ಪ್ರಶ್ನೆ</th><th>ಉತ್ತರ</th></tr>
<tr><td>ಅ) ರಾಜ್ಯದಲ್ಲಿ ಪೊಲೀಸ್ ಇಲಾಖೆಯು ಹಲವಾರು ಪ್ರಕರಣಗಳಲ್ಲಿ ವಶಕ್ಕೆ ಪಡೆದಿರುವ ದ್ವಿಚಕ್ರ, ತ್ರಿಚಕ್ರ, ಲಘು ಮತ್ತು ಭಾರಿ ಮೋಟಾರ್ ವಾಹನಗಳ ಸಂಖ್ಯೆ ಎಷ್ಟು;</td><td>ರಾಜ್ಯದಲ್ಲಿ ಪೊಲೀಸ್ ಇಲಾಖೆಯು ಹಲವಾರು ಪ್ರಕರಣಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ವಶಕ್ಕೆ ಪಡೆದಿರುವ ವಾಹನಗಳ ಸಂಖ್ಯೆ ಈ ಕೆಳಕಂಡಂತಿದೆ.
<table>
<tr><th>ವರ್ಷ</th><th>ದ್ವಿಚಕ್ರ</th><th>ತ್ರಿಚಕ್ರ</th><th>ಲಘು ಮೋಟಾರ್ ವಾಹನ</th><th>ಭಾರಿ ಮೋಟಾರ್ ವಾಹನ</th></tr>
<tr><td>2017</td><td>23775</td><td>2058</td><td>9452</td><td>7869</td></tr>
<tr><td>2018</td><td>23334</td><td>1844</td><td>8817</td><td>6251</td></tr>
<tr><td>2019</td><td>25286</td><td>2167</td><td>9268</td><td>5797</td></tr>
<tr><td>2020</td><td>4466</td><td>400</td><td>1681</td><td>993</td></tr>
</table>
</td></tr>
<tr><td>ಆ) ಇಂತಹ ವಾಹನಗಳು ಬಹಳಷ್ಟು ವರ್ಷಗಳಿಂದ ಪೊಲೀಸ್ ಇಲಾಖೆಯ ವಶದಲ್ಲಿದ್ದು ಹಾಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಗಮನಕ್ಕೆ ಬಂದಿರುತ್ತದೆ.</td></tr>
<tr><td>ಇ) ಈ ರೀತಿ ರಾಷ್ಟ್ರೀಯ ನಷ್ಟವಾಗುತ್ತಿರುವುದನ್ನು ತಡೆಯುವುದಕ್ಕೆ ಯಾವುದಾದರೊಂದು ಯೋಜನೆಯನ್ನು ರೂಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಯೋಜನೆಯ ಮಾಹಿತಿ ನೀಡುವುದು;</td><td rowspan="2">ಬೆಂಗಳೂರು ನಗರ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲಿನ ಎಲ್ಲಾ ವಿಭಾಗಗಳ ಪೊಲೀಸ್ ಠಾಣೆಗಳು ವಶಪಡಿಸಿಕೊಳ್ಳಲಾಗುವ / ಜಪ್ತಿ ಮಾಡಲಾಗುವ ವಾಹನಗಳನ್ನು ಕಾನೂನು ರೀತ್ಯ ವಿಲೇವಾರಿ ವಾಗುವವರೆಗೆ ಸುರಕ್ಷಿತವಾಗಿ ಸಂರಕ್ಷಿಸಲು ಜಮೀನನ್ನು ಈ ಕೆಳಕಂಡ ಸ್ಥಳಗಳಲ್ಲಿ ಹಂಚಿಕೆ ಮಾಡಲಾಗಿದೆ.
1) ಬೆಂಗಳೂರು ಉತ್ತರ ತಾಲ್ಲೂಕ್ ದಾಸನಪುರ ಹೋಬಳಿ, ಮಲ್ಲಸಂದ್ರ ಗ್ರಾಮದ ಸರ್ವೆ ನಂ.35ರಲ್ಲಿ – 3 ಎಕರೆ.
2) ಬೆಂಗಳೂರು ದಕ್ಷಿಣ ತಾಲ್ಲೂಕ್, ಉತ್ತರಹಳ್ಳಿ ಹೋಬಳಿ, ಕೆ.ಚೂಡಹಳ್ಳಿ ಗ್ರಾಮದ ಸರ್ವೆ ನಂ.68ರಲ್ಲಿ – 2 ಎಕರೆ.
3) ಎಸ್.ಭಂಗೀಪುರ ಗ್ರಾಮದ ಸರ್ವೆ ನಂ.79ರಲ್ಲಿ– 13 ಎಕರೆ.
ಇದಲ್ಲದೆ, ವಿವಿಧ ನಗರ ಮತ್ತು ಜಿಲ್ಲಾ ಘಟಕಗಳಲ್ಲಿ ಪೊಲೀಸ್ ಠಾಣೆ ಆವರಣದಲ್ಲಿ ಮತ್ತು ಸಿಎಆರ್/ಡಿಎಆರ್ ಗಳಲ್ಲಿ ಸುರಕ್ಷಿತ ಸ್ಥಳ ನಿರ್ಮಿಸಿ ಜಪ್ತಿ ಮಾಡಿಕೊಂಡಿರುವ ವಾಹನಗಳನ್ನು ನಿಲ್ಲಿಸಲಾಗುತ್ತಿದೆ.</td></tr>
<tr><td>ಈ) ಹಾಗಿಲ್ಲದಿದ್ದಲ್ಲಿ, ರಾಷ್ಟ್ರೀಯ ನಷ್ಟವಾಗುತ್ತಿರುವುದನ್ನು ತಡೆಯುವ ಯೋಜನೆಯನ್ನು ರೂಪಿಸಲು ಸರ್ಕಾರಕ್ಕಿರುವ ತೊಂದರೆಗಳೇನು? (ಮಾಹಿತಿ ನೀಡುವುದು)</td></tr>
</table>

	ಮುಂದುವರೆದಂತೆ, ಜಪ್ತಿ ಪಡಿಸಿಕೊಂಡಿರುವ ವಾಹನಗಳನ್ನು ಶೀಘ್ರ ವಿಲೇವಾರಿ ಮಾಡಲು ಈ ಕೆಳಕಂಡ ಕ್ರಮಗಳನ್ನು ಸಹ ಕೈಗೊಳ್ಳಲಾಗುತ್ತಿದೆ. ವಾಹನ ಕಳುವಾಗಿರುವ ಬಗ್ಗೆ ಎಸ್.ಸಿ.ಆರ್.ಬಿ. ಮತ್ತು ಸಿಸಿಆರ್‌ಬಿ/ಡಿಸಿಆರ್‌ಬಿ ಯಲ್ಲಿ ಹಾಗೂ ಸಂಬಂಧಪಟ್ಟ ಆರ್‌ಟಿಓ ಕಛೇರಿಯಲ್ಲಿ ಪರಿಶೀಲಿಸಿ ವಾರಸುದಾರರ ವಿಳಾಸ ಪತ್ತೆ ಮಾಡಿ, ವಾರಸುದಾರರಿಗೆ ವಾಹನವನ್ನು ಹಿಂತಿರುಗಿಸುವುದು. ವಾರಸುದಾರರು ಪತ್ತೆಯಾಗದಿದ್ದಲ್ಲಿ ನ್ಯಾಯಾಧೀಶರ ಅನುಮತಿ ಪಡೆದು ರಾಜ್ಯಪತ್ರದಲ್ಲಿ ಪ್ರಕಟಿಸಿ 30 ದಿನಗಳ ನಂತರ ಹರಾಜು ಪ್ರಕ್ರಿಯೆ ನಡೆಸಲಾಗುವುದು.

ಹೆಚ್‌ಡಿ 50 ಎಸ್‌ಎಸ್‌ಟಿ 2020

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು